# ಫಲಿತಾಂಶ ಮತ್ತು ಶಿಕ್ಷಕ



**ಉನ್ನತ ಸ್ಥಾನದಲ್ಲಿ ಉತ್ತೀರ್ಣರಾದ ಖಾಸಗಿ ಶಾಲೆಯ ಮಕ್ಕಳ ಫಲಿತಾಂಶ ನೋಡಿದಾಗ ಸಮಾಜವೂ ಆ ಶಾಲೆಯನ್ನು ಪ್ರಶಂಸಿಸುತ್ತದೆ. ಆದೇ ಸರ್ಕಾರಿ ಶಾಲೆಯ ಮಕ್ಕಳು ಉನ್ನತ ದರ್ಜೆಯಲ್ಲಿ ಉತ್ತೀರ್ಣರಾದರೆ ಆದರ 'ಕ್ರೆಡಿಟ್' ಮಕ್ಕಳಿಗೆ ಮಾತ್ರ ಹೋಗುತ್ತದೆ, ಶಾಲೆಗಲ್ಲ!**

■ **ವೇದಾವತಿ. ಎಂ**

ವಾಟ್ಸಾಪ್‌ನಲ್ಲಿ ಇತ್ತೀಚೆಗೆ ನೋಡಿದ ಚುಟುಕು: 'ಪರೀಕ್ಷೆಯಲ್ಲಿ ಉನ್ನತ ಸ್ಥಾನ ಪಡೆದರೆ, ಯಾರು ಹೆತ್ತ ಪುಣ್ಯಾತ್ಮನಪ್ಪ ನೀನು ಅಂತಾರೆ; ಅದೇ ಮಗು ಪರೀಕ್ಷೆಯಲ್ಲಿ ವಿಫಲವಾದರೆ ಯಾರಲೇ ಮಾಸ್ತರ ನಿನಗ ಕಲಿಸಿದವಾ ಅಂತಾರೆ!' ಇದು ತಮಾಷೆ ಎನಿಸಿದರೂ ವಾಸ್ತವಕ್ಕೆ ತುಂಬ ಹತ್ತಿರವಿದೆ. ಯಶಸ್ಸಿಗೆ ತಂದೆ– ತಾಯಿ ಕಾರಣ; ವೈಫಲ್ಯಕ್ಕೆ ಬಡಪಾಯಿ ಮೇಷ್ಟ್ರು ಕಾರಣ. ಇದು ನಮ್ಮ ಸಮಾಜದ ಧೋರಣೆಗೆ ಹಿಡಿದ ಕೈಗನ್ನಡಿ.

ಏಪ್ರಿಲ್– ಮೇ ತಿಂಗಳು ಬಂತೆಂದರೆ ಎಲ್ಲೆಡೆ ಫಲಿತಾಂಶಗಳ ಮತ್ತು ಹೊಸ ದಾಖಲಾತಿಗಳ ಆರ್ಭಟ. ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಇಲಾಖೆಯವರು ಫಲಿತಾಂಶಗಳ ವಿಷಯವಾರು, ಶಾಲಾವಾರು, ಜಾತಿವಾರು ಪಟ್ಟಿ ತಯಾರಿಸಿ ನಿರೀಕ್ಷಿತ ಫಲಿತಾಂಶ ತಲುಪದ ಶಾಲೆಗಳ ಮೇಲೆ ಆದೇಶಗಳ ನಿರಂತರ ಪ್ರಹಾರವನ್ನೇ ನಡೆಸುತ್ತಾರೆ. ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಸಭೆಗಳಲ್ಲಿ ಚುನಾಯಿತ ಪ್ರತಿನಿಧಿಗಳ ಮುಖ್ಯ ಟಾರ್ಗೆಟ್ ಶಿಕ್ಷಕರೇ. ಶಾಲೆ– ಶಾಲೆಗಳಿಗಿರಲಿ, ತಾಲ್ಲೂಕು– ತಾಲ್ಲೂಕು ಮತ್ತು ಜಿಲ್ಲೆ–ಜಿಲ್ಲೆಗಳ ನಡುವೆ ಫಲಿತಾಂಶ ಹೋಲಿಕೆಯ ಪೈಪೋಟಿ. ಅಭಿವೃದ್ಧಿಗೊಳಿಸಲು ಕ್ರಿಯಾಯೋಜನೆ, ಫಲಿತಾಂಶ ಕುಸಿತಕ್ಕೆ ಕಾರಣಗಳ ಪಟ್ಟಿ ಇತ್ಯಾದಿ ದಾಖಲೆಗಳ ತಯಾರಿಕೆಗೆ ಇಲಾಖೆಯಿಂದ ತಾಕೀತು. ಫಲಿತಾಂಶ ಕುಸಿತಕ್ಕೆ ಛೀಮಾರಿ,